# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **473**

ಸದಸ್ಯರ ಹೆಸರು : ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 24-09-2020

ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

***

| | ಪ್ರಶ್ನೆ | ಉತ್ತರ |
|---|---|---|
| ಅ) | ಶರಾವತಿ ಭೂಗರ್ಭ ಜಲವಿದ್ಯುತ್ ಯೋಜನೆಯ ಡಿಪಿಆರ್ ನಡೆಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಈ ಯೋಜನೆಯ ವಿವರಗಳೇನು? | ಕೆಪಿಸಿಎಲ್ 2000 ಮೆ.ವ್ಯಾ. ಸ್ಥಾಪಿತ ಸಾಮರ್ಥ್ಯದೊಂದಿಗೆ ಶರಾವತಿ ಪಂಪ್ಡ್ ಶೇಖರಣಾ ಯೋಜನೆಯ ಅನುಷ್ಠಾನವನ್ನು ಕೈಗೊಳ್ಳಲು ಯೋಜಿಸುತ್ತಿದೆ. ಈ ನಿಟ್ಟಿನಲ್ಲಿ ಡಿಪಿಆರ್ ತಯಾರಿಸುವ ಕೆಲಸವನ್ನು ಮೆ: ವಾಪ್ಕೋಸ್ ರವರಿಗೆ ನೀಡಲಾಗಿದೆ. ಈ ಯೋಜನೆಯನ್ನು ಈಗಿರುವ ಜಲಾಶಯಗಳ ನಡುವೆ, ತಲಕಳಲೆ ಜಲಾಶಯವನ್ನು ಮೇಲುಭಾಗ ಜಲಾಶಯವಾಗಿ ಮತ್ತು ಗೇರುಸೊಪ್ಪ ಜಲಾಶಯವನ್ನು ಕೆಳಭಾಗದ ಜಲಾಶಯವಾಗಿ ಜಾರಿಗೆ ತರಲು ಉದ್ಧೇಶಿಸಲಾಗಿದೆ, ಎರಡು ಜಲಾಶಯಗಳ ನಡುವೆ ಏಳು ಕೀಲೋ ಮೀಟರ್ ಉದ್ದದ ನೀರು ಸಾಗಿಸುವ ಸುರಂಗವನ್ನು ಪ್ರಸ್ತಾಪಿಸಲಾಗಿದೆ ಮತ್ತು 250 ಮೆ.ವ್ಯಾ , ಸಾಮರ್ಥ್ಯದ 8 ಸಂಖ್ಯೆಯ ರಿವರ್ಸಿಬಲ್ ಪಂಪ್ ಜನರೇಟರ್‌ಗಳ ಭೂಗರ್ಭ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ. |
| ಆ) | ಶರಾವತಿ ಅಂತರ್‌ಗತ ಯೋಜನೆಯಿಂದ ಎಷ್ಟು ಮೆ.ವ್ಯಾ.ವಿದ್ಯುತ್ ಉತ್ಪಾದನೆಯಾಗಲಿದೆ; ಈ ಯೋಜನೆಗೆ ಎಷ್ಟು ಖರ್ಚಾಗಲಿದೆ (ವಿವರ ನೀಡುವುದು) | 2000 ಮೆ.ವ್ಯಾ ಉದ್ಧೇಶಿತ ಶರಾವತಿ ಪಂಪ್ಡ್ ಶೇಖರಣಾ ಯೋಜನೆಯಿಂದ ಸುಮಾರು ವಾರ್ಷಿಕವಾಗಿ 4380 ದಶಲಕ್ಷ ಯುನಿಟ್ ಉತ್ಪಾದಿಸಬಹುದು. 2017ರಲ್ಲಿ ಸಿದ್ಧಪಡಿಸಿದ ಪಿಎಫ್‌ಆರ್ ಪ್ರಕಾರ, ಯೋಜನೆಯ ವೆಚ್ಚ ಸುಮಾರು ರೂ.5391.51 ಕೋಟಿ ಎಂದು ಅಂದಾಜಿಸಲಾಗಿದೆ. |
| ಇ) | ಶರಾವತಿ ಅಂತರ್‌ಗತ ಯೋಜನೆಯ ಜಿಯೋ ಟೆಕ್ನಿಕಲ್ ಸರ್ವೆ ನಡೆಸಲಾಗಿದೆಯೇ; ನಡೆಸಿದ್ದಲ್ಲಿ ಅದರ ತಾಂತ್ರಿಕ ವರದಿಗಳೇನು? | ಅರಣ್ಯ ಇಲಾಖೆಯಿಂದ ಜಿಯೋಟೆಕ್ನಿಕಲ್ ಸಮೀಕ್ಷೆಯ ಕಾರ್ಯಗಳನ್ನು ನಡೆಸಲು ದಿನಾಂಕ:06.05.2020 ರಂದು ಅನುಮೋದನೆಯನ್ನು ಪಡೆಯಲಾಗಿದೆ ಮತ್ತು ಜಿಯೋಟೆಕ್ನಿಕಲ್ ತನಿಖಾ ಕಾರ್ಯಗಳು ಪ್ರಗತಿಯಲ್ಲಿವೆ. |
| ಈ) | ಶರಾವತಿ ಭೂಗರ್ಭ ಜಲವಿದ್ಯುತ್ ಯೋಜನೆಗೆ ಸ್ಥಳೀಯ ಜನರು ಮತ್ತು ಪರಿಸರವಾದಿಗಳಿಂದ ತೀವ್ರ ವಿರೋದ ವ್ಯಕ್ತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br>ಸದರಿ ಯೋಜನೆಗೆ ಅರಣ್ಯ ಮತ್ತು ಪರಿಸರ ಇಲಾಖೆಯಿಂದ ಪರಿಸರ ಅನುಮೋದನೆಯನ್ನು ಪಡೆದ ನಂತರವೇ ಯೋಜನೆಯನ್ನು ಅನುಷ್ಠಾನದ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು. |

ಸಂಖ್ಯೆ: ಎನರ್ಜಿ 186 ಇಬಿಎಸ್ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ